

# ಹೆಣ್ಣು ಮಗು ನಾನು, ಹೆಣ್ಣೇ ಆಗಲಿ...

ಗಂಡು ಮಗುವನ್ನು ನಿರೀಕ್ಷಿಸುತ್ತಿದ್ದೀರೋ? ಹೆಣ್ಣುಮಗುವನ್ನೋ? ಈ ಪ್ರಶ್ನೆಯನ್ನು ಕರೀನಾ ಕಪೂರ್ ಮುಂದೆ ಇಟ್ಟವರ ಸಂಖ್ಯೆಗೆ ಲೆಕ್ಕವಿಲ್ಲ. ಹೋದಲ್ಲೆಲ್ಲಾ ಎಲ್ಲರೂ ಕೇಳುವುದು ಇದೇ ಪ್ರಶ್ನೆಯನ್ನು. ಉತ್ತರ ಕೊಟ್ಟೂ ಕೊಟ್ಟೂ ಕರೀನಾ ದಂಪತಿ ರೋಸಿಹೋಗಿದ್ದಾರಂತೆ.

‘ಈ ದಿನಗಳಲ್ಲಿ ಎಲ್ಲಿ ಹೋದರೂ ಒಂದೇ ಪ್ರಶ್ನೆಯನ್ನು ಕೇಳುತ್ತಾರೆ. ಅದು ನಮ್ಮಲ್ಲೂ ಗೊಂದಲ ಹುಟ್ಟಿಸುವಂಥದ್ದು. ಅದು ಗಂಡೋ, ಹೆಣ್ಣೋ? ನೀವು ಪರೀಕ್ಷೆ ಮಾಡಿಸಿದ್ದೀರಾ? ಎಂದು. ಪರೀಕ್ಷೆ ಮಾಡಿಸಿದರೆ ಏನಾದರೂ ಬದಲಾಗುತ್ತದೆಯೇ ಎಂದು ನಾನು ಕೇಳುತ್ತೇನೆ. ನಾನು ಒಬ್ಬ ಹೆಣ್ಣು ಮಗಳು. ಬಯಸುತ್ತಿರುವುದೂ ಹೆಣ್ಣು ಮಗುವನ್ನೇ. ಏಕೆಂದರೆ ಮಗನಾಗಿ ನೀಡುವುದಕ್ಕಿಂತಲೂ ಹೆಚ್ಚಿನದ್ದನ್ನು ನನ್ನ ಪೋಷಕರಿಗೆ ನಾನು ನೀಡಿದ್ದೇನೆ’ ಎಂದಿದ್ದಾಳೆ ಕರೀನಾ.

‘ನಮ್ಮ ದೇಶದಲ್ಲಿ ಇಂದಿಗೂ ಮದುವೆ ಯಾವಾಗ ಆಗುತ್ತೀಯಾ, ಮದುವೆ ಆದ ಬಳಿಕವೂ ಕೆಲಸಕ್ಕೆ ಹೋಗುತ್ತಿದ್ದೀಯಾ? ಮಕ್ಕಳಾದ ಬಳಿಕವೂ ಹೋಗುತ್ತೀಯಾ? ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾರೆ. ಈ ಪ್ರಶ್ನೆಗಳು ನನ್ನಲ್ಲಿ ಕಸಿವಿಸಿ ಉಂಟು ಮಾಡುತ್ತವೆ ಎಂದು ಬೇಸರದಿಂದ ಹೇಳಿಕೊಂಡಿದ್ದಾಳೆ ಕರೀನಾ.

# ಫೆಮಿನಿಸ್ಟ್ ಅಲ್ಲವೇ? ನೀವು ಕೆಟ್ಟ ಮನುಷ್ಯ!

ಹೀಗಂತ ಹೇಳುತ್ತಿರುವುದು ಕಲ್ಕಿ ಕೊಚ್ಲಿನ್. ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಮಹಿಳಾವಾದಿಗಳೇ. ತಾನು ಸ್ತ್ರೀವಾದಿಯಲ್ಲ ಎಂದು ಯಾರು ಪ್ರತಿಪಾದಿಸಿಕೊಳ್ಳುತ್ತಾರೋ ಅವರು ನಿಜಕ್ಕೂ ಕೆಟ್ಟ ಮನುಷ್ಯರು ಎಂದಿದ್ದಾಳೆ ಕಲ್ಕಿ.

ಎಲ್ಲರಿಗೂ ಸ್ತ್ರೀವಾದದ ಮೂಲ ‘ಎಬಿಸಿಡಿ’ ಗೊತ್ತಿರುತ್ತದೆ. ನೀವು ಸ್ತ್ರೀವಾದಿಯಲ್ಲದಿದ್ದರೆ ನಿಜಕ್ಕೂ ಕೆಟ್ಟ ವ್ಯಕ್ತಿಯೇ ಆಗಿರುತ್ತೀರಿ. ಸ್ತ್ರೀವಾದಿಯಾಗುವುದು ಎಂದರೆ ಸಮಾನತೆಯನ್ನು ಕೇಳುವುದು ಎಂದು ವ್ಯಾಖ್ಯಾನಿಸುತ್ತಾಳೆ.

‘ಆದರೆ ಜನರು ಅನೇಕ ಬಾರಿ ಅದನ್ನು ಬೇರೆ ರೀತಿಯೇ ಗ್ರಹಿಸುತ್ತಾರೆ. ಇದು ಪುರುಷರ ವಿರುದ್ಧ ಎಂಬ ಕಾರಣಕ್ಕೆ ಟೀಕೆಗಳು ವ್ಯಕ್ತವಾಗುತ್ತವೆ. ಫೆಮಿನಿಸಂ ಎನ್ನುವುದು ಪುರುಷರು ಮತ್ತು ಮಹಿಳೆಯರು ಸಮಾನರು ಎಂದು ಹೇಳುವ ಹುಚ್ಚುತನದ ಪರಿಕಲ್ಪನೆ’ ಎಂದಿದ್ದಾಳೆ ಕಲ್ಕಿ. ಯಾರೂ ಮತ್ತೊಬ್ಬರಿಗಿಂತ ಶ್ರೇಷ್ಠರಲ್ಲ. ಮಹಿಳೆಯರು ಕಾಲುಕಸವಲ್ಲ. ನಾವು ಪುರುಷರಿಗೆ ಸರಿಸಮಾನರು. ನಮ್ಮ ದೇಹ ರಚನೆ ವಿಭಿನ್ನ ಮತ್ತು ವಿಭಿನ್ನ ಜೈವಿಕ ಅಗತ್ಯಗಳನ್ನು ಬಯಸುತ್ತವೆ. ನಮ್ಮಲ್ಲಿನ ಸಾಮರ್ಥ್ಯಗಳನ್ನು ಸಮಾಜ ಸಂಭ್ರಮಿಸಬೇಕು ಮತ್ತು ಗೌರವಿಸಬೇಕು ಎನ್ನುವುದು ಆಕೆಯ ವಾದ.

ಐಟಂ ಸಾಂಗ್‌ಗಳ ಕುರಿತೂ ಕಲ್ಕಿ ಅಸಮಾಧಾನ ವ್ಯಕ್ತಪಡಿಸಿದ್ದಾಳೆ. ಕೌಟುಂಬಿಕ ಸಿನಿಮಾಗಳಲ್ಲಿಯೂ ಐಟಂ ಹಾಡುಗಳಿವೆ. ಅವುಗಳ ಸಾಹಿತ್ಯದಲ್ಲಿನ ಕೆಟ್ಟ ಪದಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತಿವೆ ಎಂಬ ಆತಂಕ ಆಕೆಯದು. ಮಹಿಳೆಯರ ಬದಲು ಪುರುಷರೇ ಹೆಚ್ಚು ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳಲಿ ಎಂಬ ಸವಾಲನ್ನೂ ಆಕೆ ಹಾಕಿದ್ದಾಳೆ.

■ ಅಮಿ

